ಶ್ರೀ ಕಾಗೋಡು ತಿಮ್ಮಪ್ಪ .—೫೫೫೯ ಜನರ ಪೈಕಿ ಎಷ್ಟು ಜನ ಜಮೀನು ಇಲ್ಲದವರು ಇದ್ದಾರೆ ? ಮತ್ತು ಎಷ್ಟು ಜನ ಸಫಿಷಿಯೆಂಟ್ ಹೋಲ್ಡರ್ಸ್ ಇದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಅಷ್ಟು ಪೂರಾ ವಿವರ ನನ್ನಲ್ಲಿಲ್ಲ.

ಶ್ರೀ ಆರ್. ರಾಜೇಗೌಡ —ನಂಜನಗೂಡಿನಲ್ಲಿ ಲ್ಯಾಂಡ್ ಆಕ್ವಿಜಿಷನ್ ಆಫೀಸರ್ ಒಬ್ಬರಿರಂ ಇದ್ದಾರೆ. ಅವರನ್ನು ಇನ್ ಛಾರ್ಜ್ ಆಗಿ ಬರೀ ಪಟ್ಟಾ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಈ ಕೆಲಸವನ್ನು ಈಗಿರತಕ್ಕ ಅಧಿಕಾರಿಗಳು ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಸ್ವಲ್ಪ ದಿನಗಳು ಕಾದು ನೋಡಿ ಅವರು ಆ ಕೆಲಸವನ್ನು ಬೇಗ ಮಾಡದಿದ್ದರೆ ಬೇರೆ ವ್ಯವಸ್ಥೆ ಮಾಡಿ ಉಳಿದವರಿಗೆ ಪಟ್ಟಾ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

1 30 P.M.

S.T. REPRESENTATIVES ON T.D. Bs. AND V.Ps IN VIRAJPET AND SOMWARPET TALUKS

523. SRI G. K. SUBBAIAH (Virajpet) —

Will the Minister for Cemm nity Development and Social Welfare be pleased to state:—

(*a*) the total population of the Scheduled Tribes of H. D. Kote Taluk, Mysore District and the Total population of Scheduled Tribes of Virajpet Taluk and Somwarpet Taluk, Coorg District as per 1961 Census ;

(*b*) the total populati n of Sche uled Castes people of these Taluks as per 1961 Census :

(*c*) the number of Scheduled Tribes representatives in the Taluk Development Boards and Village Panchayats in these Taluks :

(*d*) whether the present Taluk Development Board an l Village Panchayats are represented by Tribal people:

(*e*) if not, whether there is any proposal to amend the Rules.

SRI M. MALLIKARJUNA SWAMY (Minister for Community Development and Social Welfare).—

(*a*)	1	H. D. Kote Taluk	...	...	4,070
	2	Virajpet Taluk	...	...	21,143
	3	Somwarpet Taluk	...	...	3,802
(b)	1	H. D. Kote Taluk	...	...	23,607
	2	Virajpet Taluk	...	...	10,591
	3	Somwarpet Taluk	...	...	14,682

(*c*) *H. D. Kote*

1 No representatives in TDB. There are 45 representatives in the Village Panchayats.

Virajpet and Somwarpet Taluks

There are no S. T. Representatives either in TDBs or in V.Ps.

(*d*) No.

(*e*) This will be examined.

ಶ್ರೀ ಜೆ. ಕೆ. ಸುಬ್ಬಯ್ಯ — ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಪೆಡ್ಡೂಲ್ಡ್ ಟ್ರೈಬಿನವರಿಗೆ ಪ್ರಾತಿನಿಧ್ಯ ಇಲ್ಲದೆ ಇರುವುದಕ್ಕೆ ಕಾರಣವೇನು ?

† ಶ್ರೀ ಎಂ ಮಲ್ಲಿಕಾರ್ಜುನ ಸ್ವಾಮಿ.— ಅಲ್ಲಿ ಅವರ ಪ್ರಜಾ ಸಂಖ್ಯೆ ಎಷ್ಟು ಇರಬೇಕೋ ಅ ್ಟ ಇಲ್ಲದಿರುವುದೇ ಮುಖ್ಯ ಕಾರಣ.

ಶ್ರೀ ಜಿ. ಕೆ. ಸುಬ್ಬಯ್ಯ.— ವಿರಾಜಪೇಟೆಯಲ್ಲಿ ಪೆಡ್ಡೂಲ್ಡ್ ಟ್ರೈಬಿನವರ ಪ್ರಜಾಸಂಖ್ಯೆ ೨೧೨೪ ಮತ್ತು ಸೋಮವಾರ ಪೇಟೆಯಲ್ಲಿ ೩೮೦೨ ಎಂದು ತಿಳಿಸಿದ್ದಾಗ್ಗೂ ಅಲ್ಲಿ ಇವರ ಪ್ರಾತಿನಿಧ್ಯ ಇಲ್ಲದೆ ಇರಲು ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಅಲ್ಲಿ ಇರತಕ್ಕ ಅವರ ಪ್ರಜಾಸಂಖ್ಯಾ ಪ್ರಮಾಣದಲ್ಲಿ ಅವರಿಗೆ ಪ್ರಾತಿನಿಧ್ಯ ಕೊಡುವುದಾದರೆ ಅವರಿಗೆ ಮೂರು ಸೀಟುಗಳನ್ನು ಕೊಡಬೇಕಾಗುತ್ತದೆ.

ಶ್ರೀ ಜಿ. ಕೆ. ಸುಬ್ಬಯ್ಯ.— ಇದರಿಂದ ಸರ್ಕಾರದವರು ಮಾಡಿಕೊಂಡಿರತಕ್ಕ ಆ ಆಕ್ಟ್ ಸರಿಯಾಗಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ — ೧೯೫೯ನೇ ವಿಲೇಜ್ ಪಂಚಾಯ್ತಿ ಆಕ್ಟ್—ಸೆಕ್ಷನ್ ೨೩೭ ರ ಪ್ರಕಾರ ಹಿಂದೆ ಇದ್ದವರು ಮಾಡಿದ್ದಾರೆ. ಅದರಲ್ಲಿ ಈ ಒಂದು ಲೆಕೂನ ಇದೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಸರಿ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ — ಈ ಅಕ್ರಮವನ್ನು ತಕ್ಷಣ ಡೀಲಿಮಿಟೇಷನ್ ಮೂಲಕ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಒಂದು ತಾಲ್ಲೂಕಿನಲ್ಲಿ ಇವರ ಪ್ರಜಾ ಸಂಖ್ಯೆ ಒಂದು ಲಕ್ಷ ಕ್ಕಿಂತ ಕಡಮೆ ಇದ್ದರೆ ತಾಲ್ಲೂಕ್ ಬೋರ್ಡುಗಳಲ್ಲಿ ಇವರಿಗೆ ೧೫ ಪ್ರಾತಿನಿಧ್ಯಗಳನ್ನು ಒದಗಿಸಿಕೊಡಬೇಕೆಂದೂ, ಒಂದು ಲಕ್ಷಕ್ಕೆ ಜಾಸ್ತಿ ಇದ್ದರೆ ೧೯ ಸೀಟುಗಳನ್ನು ಒದಗಿಸಿ ಕೊಡಬೇಕೆಂದೂ ನಿಗದಿ ಮಾಡಿದ್ದಾರೆ. ಹಾಗೆ ಜನ ಸಂಖ್ಯೆ ಮೇಲೆ ನಾವು ಲೆಕ್ಕ ಹಾಕುವುದಾದರೆ ಅಲ್ಲಿ ಇವರಿಗೆ ಮೂರು ಸೀಟುಗಳನ್ನು ಕೊಡುವುದಕ್ಕೆ ಅವಕಾಶವಿದೆ. ಕಾನೂನಲ್ಲಿ ಸ್ವಲ್ಪ ದೋಷವಿದೆ. ಅದನ್ನು ಸರಿಪಡಿಸಿ ಇವರ ಪ್ರಾತಿನಿಧ್ಯವನ್ನು ಸರಿಪಡಿಸಲಾಗುತ್ತೆಂದು ನಾನಾಗಲೇ ಹೇಳಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ಇದನ್ನು ಬೇಗ ಸರಿಪಡಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಬೇಗ ಸರಿಪಡಿಸುತ್ತೇವೆ ಎಂದು ಆಗಲೆ ಹೇಳಿದ್ದೇನೆ.

ಶ್ರೀ ಎಂ. ಬಿ ರಾಮಸ್ವಾಮಿ .— ಅಂಕಿ ಅಂಶಗಳನ್ನು ಒದಗಿಸತಕ್ಕ ಇಲಾಖೆಯವರು ಸರಿಯಾಗಿ ಅಂಕಿ ಅಂಶಗಳನ್ನು ಒದಗಿಸದಿರುವುದರಿಂದ ಅನೇಕ ಹಳ್ಳಿಗಳು ಹೀಗೇ ಕೈಬಿಟ್ಟಿರುತ್ತವೆ ಇಲ್ಲಿ ಈಗ ಹೇಗೆ ಕೈಬಿಟ್ಟಿರುವಂತೆ ಬೇರೆ ಒಂದೆರಡು ಕಡೆಗಳಲ್ಲಿ ಹೀಗೇ ಮಾಡಿದ್ದಾರೆ. ಅದನ್ನೂ ಕೂಡಲೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಸರ್ಕಾರದವರ ಗಮನಕ್ಕೆ ತಂದರೆ ಅದನ್ನೂ ಕೂಡ ಕೂಡಲೆ ಸರಿಪಡಿಸಲಾಗುತ್ತದೆ.

ಶ್ರೀ ಕಳಗೋಡು ತಿಮ್ಮಪ್ಪ.—ಈ ಹರಿಜನ ಗಿರಿಜನರ ಪ್ರಜಾ ಸಂಖ್ಯೆಯ ಆಧಾರದ ಮೇಲೆ ಇವರಿಗೆ ನಿಧ್ಯವನ್ನು ನಿಗದಿ ಮಾಡಲಾಗುತ್ತೆಂದು ಹೇಳೋಣವಾಯಿತು. ಆದರೆ ಅವರ ಪ್ರಜಾಸಂಖ್ಯೆ ಕೆಲವು ಕಡೆ ೧೦ ಇರಬಹುದು. ಅಂಥ ಕಡೆಯಲ್ಲೂ ಇವರಿಗೆ ಪ್ರಾತಿನಿಧ್ಯ ಕೊಡುವುದು ನ್ಯಾಯವಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ೧೯೫೯ ರಲ್ಲಿ ಇದೇ ಸಭೆಯವರು ಇಲ್ಲಿ ಪಾಸ್ ಮಾಡಿದ ಆಕ್ಟ್ ಏನಿದೆ ಅದರ ಪ್ರಕಾರ ನಾವು ಕೆಲಸಗಳನ್ನೂ ಮಾಡಬೇಕಾಗಿದೆ. ಅದನ್ನು ಮೀರುವುದಕ್ಕಾಗುವುದಿಲ್ಲ.